# ಬೆಳಕು ಬಳುಕಿನ ಅಪ್ಸರೆ



ಭಾರತೀಯ ಚಿತ್ರರಂಗದ 'ಐಟಂ ಹಾಡು'ಗಳ ರೋಚಕ ಚರಿತ್ರೆಯಲ್ಲಿ ಜ್ಯೋತಿಲಕ್ಷ್ಮಿ ಅವರದು ಪ್ರಕಾಶಮಾನವಾದ ಹೆಸರು. ಕ್ಯಾಬರೆ ನರ್ತಕಿಯ ಜೊತೆಗೆ ನಟಿಯಾಗಿಯೂ ಗುರ್ತಿಸಿಕೊಂಡಿದ್ದು ಅವರ ವಿಶೇಷ.

■ ಮಹತಿ

ಎನ್.ಟಿ.ರಾಮರಾವ್ ನಟನೆಯ 'ಸರ್ದಾರ್ ಪಾಪಾರಾಯುಡು' (1980, ನಿ: ದಾಸರಿ ನಾರಾಯಣರಾವ್) ತೆಲುಗಿನ ಯಶಸ್ವಿ ಚಿತ್ರಗಳಲ್ಲೊಂದು. ಆ ಸಿನಿಮಾ ಐವತ್ತು ದಿನಗಳ ಪ್ರದರ್ಶನ ಕಂಡ ನಂತರ, ವಿಶೇಷ ಆಕರ್ಷಣೆಯ ರೂಪದಲ್ಲಿ ಹಾಡೊಂದನ್ನು ಸೇರಿಸಲಾಯಿತು. ಹೊಸ ಹಾಡಿನ ಸೇರ್ಪಡೆ ಪ್ರೇಕ್ಷಕರನ್ನು ಹುಚ್ಚೆಬ್ಬಿಸಿತು. ಆ ಹಾಡನ್ನು ನೋಡಲಿಕ್ಕೆಂದೇ ಪ್ರೇಕ್ಷಕರು ಮತ್ತೆ ಮತ್ತೆ ಸಿನಿಮಾ ನೋಡಿದರು. 'ಜ್ಯೋತಿಲಕ್ಷ್ಮಿ ಚೀರಕಟ್ಟಿಂದಿ' (ಜ್ಯೋತಿಲಕ್ಷ್ಮಿ ಸೀರೆ ಉಟ್ಟಿದ್ದಾಳೆ) ಎನ್ನುವ ಆ ಗೀತೆಯ ಪ್ರಮುಖ ಆಕರ್ಷಣೆ ಎನ್‌ಟಿಆರ್ ಅವರಲ್ಲ; ಜ್ಯೋತಿಲಕ್ಷ್ಮಿ ಎನ್ನುವ ಮಿಂಚಿನಬಳ್ಳಿ!

ಜ್ಯೋತಿಲಕ್ಷ್ಮಿ ಹೆಸರಿನಲ್ಲಿನ 'ಜ್ಯೋತಿ' ಎನ್ನುವ ವಿಶೇಷಣ ತೆರೆಯ ಮೇಲಿನ ಅವರ ವ್ಯಕ್ತಿತ್ವದಲ್ಲೂ ಇತ್ತು. 'ಜ್ಯೋತಿ'ಯ ಬೆಳಕು, ಬಳುಕು ಹಾಗೂ ಕಾವು – ಮೂರನ್ನೂ ಜ್ಯೋತಿಲಕ್ಷ್ಮಿ ಎನ್ನುವ ನೃತ್ಯಗಾತಿಯಲ್ಲಿ ಕಾಣಬಹುದಿತ್ತು. 'ಪಾಪಾರಾಯುಡು' ಸಿನಿಮಾದ ಗೀತೆಯನ್ನೇ ನೋಡಿ; ಕೆಂಪುಸೀರೆಯಲ್ಲಿ ಹಾಡಿಕುಣಿಯುವ ನೃತ್ಯಾಂಗನೆ ನೋಡುಗರ ಮೈಮನಗಳನ್ನು ಉದ್ದೀಪಿಸುವುದು ಒಂದು ತೂಕವಾದರೆ, 'ಜ್ಯೋತಿಲಕ್ಷ್ಮಿ ಸೀರೆ ಉಟ್ಟಿದ್ದಾಳೆ ಎನ್ನುವುದೇ' ಒಂದು ಬೆರಗಾಗಿ ಗೀತೆಯಲ್ಲಿ ಪರಿಣಮಿಸಿದೆ.

ಎಪ್ಪತ್ತು ಎಂಬತ್ತರ ದಶಕದ ಚಿತ್ರರಸಿಕರ ಪಾಲಿಗೆ ಜ್ಯೋತಿಲಕ್ಷ್ಮಿ ಉದ್ದೀಪಕ ಸೌಂದರ್ಯದ ಅಭಿವ್ಯಕ್ತ ರೂಪದಂತಿದ್ದರು. ತೆಲುಗು, ತಮಿಳಿನಲ್ಲಂತೂ ಎನ್.ಟಿ.ಆರ್, ನಾಗೇಶ್ವರರಾವ್, ಕೃಷ್ಣ, ಶಿವಾಜಿ ಗಣೇಶನ್, ಎಂಜಿಆರ್ ಅವರಂಥ ತಾರಾವರ್ಚಸ್ಸಿನ ನಾಯಕನಟರ ಚಿತ್ರಗಳ ಗ್ಲಾಮರ್ ಹೆಚ್ಚಿಸಿದ ಅಗ್ಗಳಿಕೆ ಅವರದು. ಕನ್ನಡದಲ್ಲೂ ಅವರ ಸೆಳೆತ ಕಡಿಮೆಯೇನಿರಲಿಲ್ಲ. 'ಕುಳ್ಳ ಏಜೆಂಟ್ 000', 'ಬೆಂಗಳೂರು ಮೇಲ್', 'ಪ್ರತಿಧ್ವನಿ', 'ಚೆಲ್ಲಿದ ರಕ್ತ', 'ರಕ್ತ ಕಣ್ಣೀರು', 'ವಿಜಯದಶಮಿ', ಸೇರಿದಂತೆ ಹಲವು ಚಿತ್ರಗಳಲ್ಲಿ ಅವರು ಕಾಣಿಸಿಕೊಂಡಿದ್ದರು. ಹಿಂದಿ ಹಾಗೂ ದಕ್ಷಿಣ ಭಾರತದ ಸಿನಿಮಾಗಳು ಸೇರಿದಂತೆ ಪಂಚಭಾಷಾ ತಾರೆಯಾಗಿ ಗುರ್ತಿಸಿಕೊಂಡಿದ್ದರು.

ಕ್ಯಾಬರೆ ನರ್ತಕಿಯಾಗಿ ಜನಪ್ರಿಯತೆ ಗಳಿಸಿದರೂ ಆಗೊಮ್ಮೆ ಈಗೊಮ್ಮೆ ಅವರು ನಾಯಕಿ ಪಾತ್ರಗಳಲ್ಲಿ ನಟಿಸಿರುವುದೂ ಇದೆ. ಹಾಸ್ಯಪಾತ್ರಗಳಲ್ಲಿ, ಗ್ಯಾಂಗ್‌ಸ್ಟರ್ ಪ್ರೇಯಸಿಯಾಗಿ, ವಿಲನ್ ಆಗಿ – ಹೀಗೆ, ಭಿನ್ನ ಪಾತ್ರಗಳಿಗೆ ಜೀವ ತುಂಬಿದ್ದಾರೆ. 'ನಮ್ಮನ್ನು ನೋಡಿ ಜನ ಆನಂದಿಸುತ್ತಾರೆ, ಎದುರಿಗೆ ಗೌರವಿಸುತ್ತಾರೆ. ಆದರೆ ಹಿಂದಿನಿಂದ ಕೆಟ್ಟ ಮಾತುಗಳನ್ನಾಡುತ್ತಾರೆ' ಎನ್ನುವ ಕಟು ವಾಸ್ತವ ಜ್ಯೋತಿಲಕ್ಷ್ಮಿ ಅವರಿಗೆ ತಿಳಿದಿತ್ತು. ಆದರೆ, 'ನಟಿ ಎಂದ ಮೇಲೆ ಎಲ್ಲ ರೀತಿಯ ಪಾತ್ರಗಳಲ್ಲೂ ನಟಿಸಬೇಕು. ತನಗೆ ಸಿಕ್ಕ ಪಾತ್ರಗಳಿಗೆ ನ್ಯಾಯ ಸಲ್ಲಿಸಬೇಕು' ಎನ್ನುವುದು ಅವರ ನಂಬಿಕೆಯಾಗಿತ್ತು. ಈ ನಂಬಿಕೆಯಿಂದಲೇ, ನಾಯಕಿ ಪಾತ್ರಗಳಲ್ಲಿ ನಟಿಸಿದಷ್ಟೇ ಆಸ್ಥೆಯಿಂದ ಕ್ಯಾಬರೆ ನರ್ತನಗಳಲ್ಲೂ ಮೈಬಳುಕಿಸಿದರು. (ಹುಟ್ಟಿದ ಮಗಳಿಗೆ ಮೂರು ತಿಂಗಳಾಗಿದ್ದಾಗಲೂ ಎದ್ದು ಬಂದು 'ಕುರುಕ್ಷೇತ್ರಂ' ಸಿನಿಮಾದಲ್ಲಿ ನರ್ತಿಸಿದ ವೃತ್ತಿಪರತೆ ಜ್ಯೋತಿಲಕ್ಷ್ಮಿ ಅವರದು). ಜ್ಯೋತಿಲಕ್ಷ್ಮಿ ಅವರೇ ಹೇಳಿಕೊಂಡಿರುವಂತೆ, ಅವರು ನಟಿಸಿದ 500ಕ್ಕೂ ಹೆಚ್ಚು ಚಿತ್ರಗಳಲ್ಲಿ ಸುಮಾರು 30 ಸಿನಿಮಾಗಳಲ್ಲಿ ನಾಯಕಿಯಾಗಿ ನಟಿಸಿದ್ದಾರೆ.

ಅಂದಹಾಗೆ, ಜ್ಯೋತಿಲಕ್ಷ್ಮಿ ತಮಿಳುನಾಡು ಮೂಲದವರು. ಅವರ ತಾಯಿ ಶಾಂಭವಿ ಕಾಂಚಿಪುರಂನ ನಾಯ್ಡು ಸಮುದಾಯಕ್ಕೆ ಸೇರಿದವರು. ಅಪ್ಪ ಟಿ.ಕೆ. ರಾಮರಾಜನ್ ತಂಜಾವೂರು ಜಿಲ್ಲೆಗೆ ಸೇರಿದವರು. ಚಿಕ್ಕಂದಿನಲ್ಲೇ ಜ್ಯೋತಿಲಕ್ಷ್ಮಿಯನ್ನು ಸೋದರ ಸಂಬಂಧಿ ಧನಲಕ್ಷ್ಮಿ ಎನ್ನುವವರಿಗೆ ದತ್ತು ಕೊಟ್ಟಿದ್ದರು. ನಿರ್ದೇಶಕ ಟಿ.ಆರ್. ರಾಮನ್ ಜ್ಯೋತಿಲಕ್ಷ್ಮಿ ಅವರ ಸೋದರಮಾವ. ಸೋದರತ್ತೆ ಟಿ.ಆರ್. ರಾಜಕುಮಾರಿ ನಲವತ್ತರ ದಶಕದಲ್ಲಿ ಪ್ರಸಿದ್ಧ ನಾಯಕಿ.

ಚಿಕ್ಕಂದಿನಿಂದಲೂ ಜ್ಯೋತಿಲಕ್ಷ್ಮಿಗೆ ಸಿನಿಮಾ ಎಂದರೆ ಸೆಳೆತ. ಸೋದರಸೊಸೆಯ ಸಿನಿಮಾ ಪ್ರೀತಿಗೆ ನೀರೆರೆದದ್ದು ರಾಮನ್. ಅವರು ತಮ್ಮ ನಿರ್ದೇಶನದ ತಮಿಳು ಸಿನಿಮಾದಲ್ಲಿ ನಟನೆಯ ಅವಕಾಶ ಕಲ್ಪಿಸಿಕೊಟ್ಟರು. ಆಗ ಜ್ಯೋತಿಲಕ್ಷ್ಮಿ ಐದು ವರ್ಷದ ಹುಡುಗಿ. ಅದಾದ ಮೇಲೆ ಎಂಟು ವರ್ಷದ ಹುಡುಗಿಯಾಗಿದ್ದಾಗ ಮತ್ತೊಮ್ಮೆ ಮಾವನ ಸಿನಿಮಾದಲ್ಲಿ ಬಣ್ಣ ಹಚ್ಚಿದಳು. ಹೀಗೆ ಬಾಲನಟಿಯಾಗಿ ಗುರ್ತಿಸಿಕೊಂಡ ಜ್ಯೋತಿ, ನಂತರದಲ್ಲಿ ಹಾಸ್ಯನಟಿಯಾಗಿ ಬೆಳೆದರು. ಅದೇ ಸಮಯದಲ್ಲಿ ಮಲಯಾಳಂ ಚಿತ್ರರಂಗದಿಂದಲೂ ಅವಕಾಶಗಳು ಬರತೊಡಗಿದವು. ನಂತರದ ಸರದಿ ತೆಲುಗು ಚಿತ್ರರಂಗದ್ದು. 'ಪೆದ್ದಕ್ಕಯ್ಯ' ಸಿನಿಮಾದಲ್ಲಿ ನಟಿಸಿದ ನಂತರ ಅವಕಾಶಗಳು ಸಾಲುಸಾಲಾಗಿ ಬರತೊಡಗಿದವು. ಅವುಗಳಲ್ಲಿ ಐಟಂ ಕುಣಿತಗಳೇ ಹೆಚ್ಚಾಗಿದ್ದವು. ಹೀಗೆ ದಕ್ಷಿಣ ಭಾರತದ ಪ್ರದಕ್ಷಿಣೆ ಅವರಿಗೆ ತಾರಾವರ್ಚಸ್ಸು ತಂದುಕೊಟ್ಟಿತು.

ಜ್ಯೋತಿಲಕ್ಷ್ಮಿ ಹಾಗೂ ಮತ್ತೊಬ್ಬ ಪ್ರಸಿದ್ಧ ಕ್ಯಾಬರೆ ನಟಿ ಜಯಮಾಲಿನಿ ಅಕ್ಕತಂಗಿಯರು. ಅಕ್ಕತಂಗಿಯರಿಬ್ಬರೂ ಜೊತೆಯಲ್ಲಿ ಪರದೆ ಹಂಚಿಕೊಂಡಿರುವುದೂ ಇದೆ. ತಂಗಿ ಚಿತ್ರರಂಗ ಪ್ರವೇಶಿಸಿದ ನಂತರ ಅಕ್ಕನಿಗೆ ಅವಕಾಶ ಕಡಿಮೆಯಾಯಿತು ಎಂದು ಜ್ಯೋತಿಲಕ್ಷ್ಮಿ ಅವರ ಸಿನಿಮಾ ಬದುಕನ್ನು ವಿಶ್ಲೇಷಿಸಲಾಗುತ್ತದೆ. ಆದರೆ, ಜ್ಯೋತಿಲಕ್ಷ್ಮಿ ಅವರು ಈ ವಾದವನ್ನು ನಿರಾಕರಿಸಿದ್ದರು. 'ಮದುವೆಯಾದ ನಂತರ ನಟಿಸುವುದನ್ನು ಕಡಿಮೆ ಮಾಡಿದೆ. ಈ ಅವಧಿಯಲ್ಲಿ ಜಯಮಾಲಿನಿ ಹೆಚ್ಚು ಸಿನಿಮಾಗಳಲ್ಲಿ ನಟಿಸಿದಳು' ಎನ್ನುವ ತರ್ಕ ಅವರದು.

ಜ್ಯೋತಿಲಕ್ಷ್ಮಿ ಅವರ ಮದುವೆ ಕೂಡ ಒಂದು ಸಿನಿಮಾ ಕಥೆಯಂತೆಯೇ ರೋಚಕವಾಗಿದೆ. ಕೆಲವು ಸಿನಿಮಾಗಳಿಗೆ ಛಾಯಾಗ್ರಾಹಕರಾಗಿ ದುಡಿದಿರುವ ಸಾಯಿಪ್ರಸಾದ್ ಜ್ಯೋತಿಲಕ್ಷ್ಮಿ ಅವರ ಸಂಗಾತಿ. ಸಿನಿಮಾ ಚಿತ್ರೀಕರಣದ ಸಂದರ್ಭದಲ್ಲೇ ಇಬ್ಬರೂ ಪ್ರೇಮಿಸತೊಡಗಿದರು. ಕುಟುಂಬದವರು